should do things like this ? Have they any respect for the Government ? What can we do if you give such reports ? ೧೫೩೭ ಲಕ್ಷ ಲಾಸ್ ಆಗಿದೆ. ಇದರ ಬಗ್ಗೆ ಹೇಳಿದರೆ ತಪ್ಪಾಗಿ ಸಿಟ್ಟು ಬರುತ್ತದೆ. ಇದಕ್ಕೆ ಏನು ಹೇಳಬೇಕು. ನೀವೇ ಹೇಳಿ.

ಶ್ರೀ ಸಿ. ವೀರಣ್ಣ.—ಅವರನ್ನು ಟ್ರಾನ್ಸ್‌ಫರ್ ಮಾಡಿದ ಕಾರಣಕ್ಕೆ ಮತ್ತು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ ಕಾರಣಕ್ಕೆ ಫ್ಯಾಕ್ಟರಿ ನಷ್ಟ ಅನುಭವಿಸಿಲ್ಲವೆಂದು ನಾನು ಹೇಳುತ್ತೇನೆ.

ಆನೇಕಲ್ ತಾಲ್ಲೂಕಿಗೆ ವಿದ್ಯುತ್ ಸರಬರಾಜು

೧೫೩೩ (೬೬೭) ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಆನೇಕಲ್ ತಾಲ್ಲೂಕಿನಲ್ಲಿ ೧೯೮೮-೮೯ ಹಾಗೂ ಈ ತಹಲ್‌ವರೆಗೆ ಎಷ್ಟು ಪಂಪು ಸೆಟ್ಟುಗಳಿಗೆ ವಿದ್ಯುತ್ ಸರಬರಾಜಿಗಾಗಿ ರೈತರಿಂದ ಅರ್ಜಿಗಳು ಬಂದಿವೆ ?

ಆ) ಈ ಅರ್ಜಿಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ವಿದ್ಯುತ್ ಒದಗಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಇನ್ನೂ ವಿದ್ಯುತ್ ಒದಗಿಸಬೇಕಾಗಿದೆ?

ಇ) ಉಳಿದವುಗಳಿಗೆ ಎಂದು ವಿದ್ಯುತ್ ಒದಗಿಸಲಾಗುವುದು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ೧-೪-೧೯೮೮ ರಿಂದ ೨೦-೩-೧೯೮೯ರವರೆಗೆ ೫೭೮ ಅರ್ಜಿಗಳು ಮಂಡಳಿಯಲ್ಲಿ ನೋಂದಾಯಿಸಲ್ಪಟ್ಟಿವೆ.

ಆ) ಅರ್ಜಿಗಳ ಪೈಕಿ ೨೩೪ ಅರ್ಜಿದಾರರಿಗೆ ವಿದ್ಯುತ್ ಒದಗಿಸಲಾಗಿದೆ. ೨೦-೩-೧೯೮೯ರಲ್ಲಿ ಬಾಕಿ ಉಳಿದ ಅರ್ಜಿಗಳ ಸಂಖ್ಯೆ. ೩೪೪

ಇ) ಇವುಗಳಿಗೆ ಮುಂದಿನ ಸಾಲಿನಲ್ಲಿ ವಿದ್ಯುತ್ ಒದಗಿಸಲು ಪ್ರಯತ್ನಿಸಲಾಗುತ್ತದೆ.

ಶ್ರೀ ಎಂ. ಪಿ. ಕೇಶವಮೂರ್ತಿ.—ಸನ್ಮಾನ್ಯ ಸಭಾಧ್ಯಕ್ಷರೇ, ೧೯೮೮-೮೯ನೇ ವರ್ಷದಗುರಿಯು ಎಷ್ಟಿದೆ ? ಅದರಲ್ಲಿ ಸಾಧನೆ ಎಷ್ಟು ಮಾಡಿದ್ದಾರೆ ? ಈಗಾಗಲೇ ರೈತರು ಸಾವಿರಾರು ರೂಪಾಯಿಗಳ ಸಾಲಪತ್ರವನ್ನು ಮಾಡಿ ಕೊಳವೆಬಾವಿಗಳನ್ನು ತೋಡಿಸಿ, ವಿದ್ಯುತ್ ಇಲ್ಲದೆ ಬಹಳ ತೊಂದರೆಗೆ ಒಳಗಾಗಿದ್ದಾರೆ. ನಮ್ಮ ಆನೇಕಲ್ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅದ್ಯತೆಯ ಮೇರೆಗೆ ಅದಷ್ಟು ಜಾಗ್ರತೆ ಉಳಿದಿರತಕ್ಕಂಥ ಕೊಳವೆಬಾವಿಗಳಿಗೆ ವಿದ್ಯುತ್‌ಚ್ಛಕ್ತಿಯನ್ನು ಕೊಡಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—೧೯೮೩ರಲ್ಲಿ ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗ ಸುಮಾರು ೪೦ ಸಾವಿರ ಪಂಪ್‌ಸೆಟ್‌ಗಳಿಗೆ ಪ್ರತೀ ವರ್ಷವೂ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದು ಘೋಷಣೆ ಮಾಡಿ ಪ್ರತಿವರ್ಷವೂ ಕೂಡ ಟಾರ್ಗೆಟ್ ಮೀರಿ ಕೆಲಸ ಮಾಡಿದ್ದೇವೆ. ೪೧ ಸಾವಿರ ಪಂಪ್‌ಸೆಟ್‌ಗಳಿಗೆ ೧೯೮೭-೮೮ರಲ್ಲಿ ಸರ್ವಿಸನ್ ಕೊಟ್ಟಿದ್ದೇವೆ. ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೆವೋ ಅದಕ್ಕಿಂತ ಕಡಿಮೆ ಕೆಲಸವನ್ನು ನಾವ್ ಮಾಡಿಲ್ಲ. ಈಗ ಉಳಿದಿರತಕ್ಕಂಥ ೧೧೦ ಪಂಪ್‌ಸೆಟ್‌ಗಳ ಕೆಲಸ ವಿವಿಧ ಹಂತದಲ್ಲಿದೆ. ಹಿಳಿಳಿ ಅರ್ಜಿಗಳು ಬಾಕಿ ಇದ್ದರೂ ೧೯೬೬ ಪಂಪ್‌ಸೆಟ್‌ಗಳ ಕೆಲಸ ಸಂಪೂರ್ಣವಾಗಿ ಮುಗಿದಿದ್ದು ಅವುಗಳಿಗೆ ಸರ್ವಿಸ್ ಕೊಡಬೇಕಾಗಿದೆ. ನಮ್ಮ ಗುರಿ ಮೀರಿ ೧೦ ಪರ್‌ಸೆಂಟ್‌ನಷ್ಟು ಆದರೂ ಕೆಲಸ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡಬಯಸುತ್ತೇನೆ.

ವರಾಹಿ ಜಲವಿದ್ಯುತ್ ಯೋಜನೆಯಂ ಸಣ್ಣ ಅಣೆಕಟ್ಟು

೧೫೪೪(೬೪೧) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—